

# ಗೆರಿಲ್ಲಾ ಕಣ್ಣಲ್ಲಿ ಪಲ್ಲಾಸ್ ಕ್ಯಾಟ್

**ಹಿಮಪರ್ವತದಲ್ಲಿ ಕಾಣಿಸುವ 'ಪಲ್ಲಾಸ್ ಕ್ಯಾಟ್' ಸದಾ ಕೆಂಗಣ್ಣಿನ ನೋಟವನ್ನೇ ಬೀರುತ್ತಿರುತ್ತದೆ. ಹಾಗೆಂದು ಅದು ಸಿಟ್ಟನ್ನು ಹೊರಹೊಮ್ಮಿಸುವ ಬಗೆಯಲ್ಲ. ಸಂಕೋಚದ ಆ ಹಿಮಬೆಕ್ಕಿಗೆ ಒಂಟಿತನವೇ ಅತ್ಯಾಪ್ತ.**

**ಆರ್ಕೆ**

ಅರುಣಾಚಲ ಪ್ರದೇಶದಲ್ಲಿ ವಿಶ್ವ ವನ್ಯಜೀವಿ ಸಂಸ್ಥೆ ನಡೆಸುತ್ತಿರುವ ಸಮೀಕ್ಷೆಯಲ್ಲಿ ಬೆಕ್ಕಿನ ಜಾತಿಯ 'ಮನುಲ್' ಪತ್ತೆಯಾಗಿದೆ. ಜೀವ ಜಗತ್ತಿನಲ್ಲಿ ಅಪರೂಪದಲ್ಲಿ ಒಂದಾದ ಮನುಲ್ ಅನ್ನು 'ಪಲ್ಲಾಸ್ ಕ್ಯಾಟ್' ಎಂದು ಕರೆಯುತ್ತಾರೆ. ಅರುಣಾಚಲ ಪ್ರದೇಶದ ಹಿಮಪರ್ವತದ 4200 ಮೀಟರ್ ಎತ್ತರದಲ್ಲಿ ಅದು ಜೀವಿಸುತ್ತಿರುವ ಬಗ್ಗೆ ಸುಳಿವು ಸಿಕ್ಕಿದೆ. ಹಿಮದ ಗುಡ್ಡಗಳ ಕಣಿವೆಯಲ್ಲಿ ಅಳವಡಿಸಿದ ಕ್ಯಾಮೆರಾ ಕಣ್ಣಿಗೆ ಬೆಕ್ಕಿನ ಜಾತಿಗೆ ಸೇರಿದ ಪಲ್ಲಾಸ್ ಸೆರೆಯಾಗಿದೆ.

ಅರುಣಾಚಲ ಪ್ರದೇಶದ ಹಿಮಾಚ್ಛಾದಿತ ಪ್ರದೇಶದಲ್ಲಿ ಅಳವಡಿಸಿದ್ದ ಕ್ಯಾಮೆರಾ ಕಾಡುಬೆಕ್ಕಿನ ಜಾತಿಯ 'ಪಲ್ಲಾಸ್ ಕ್ಯಾಟನ' ಚಿತ್ರವನ್ನು ಸೆರೆಹಿಡಿದಿತ್ತು. ಅದನ್ನು ಅಧಿಕೃತವಾಗಿ ಇತ್ತೀಚೆಗೆ ಬಿಡುಗಡೆ ಮಾಡಲಾಗಿದೆ. ಅರುಣಾಚಲ ಪ್ರದೇಶದ ತವಾಂಗ್, ಪಶ್ಚಿಮ ಕಾಮೆಂಗ್ ಜಿಲ್ಲೆಯ ಹಿಮಗಾಡಿನಲ್ಲಿ ವಿಶ್ವ ವನ್ಯಜೀವಿ ಸಂಸ್ಥೆಯ ಭಾರತದ ಘಟಕವು ಅರಣ್ಯ ಇಲಾಖೆಯ ಸಹಯೋಗದ ಜೊತೆ ಸಮೀಕ್ಷೆಯನ್ನು ನಡೆಸುತ್ತಿದೆ. ಈ ಸಂಬಂಧ ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಹಿಮಗುಡ್ಡಗಳ 83 ಸ್ಥಳಗಳಗಳಲ್ಲಿ 136 ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು.

ಹಿಮಪರ್ವತಗಳಲ್ಲಿ ಅಪರೂಪ ಜೀವಿಗಳು ನೆಲೆಗೊಂಡಿರುವ ಬಗ್ಗೆ ಆಗಾಗ ವರದಿಯಾಗುತ್ತಿರುತ್ತದೆ. ಇತ್ತೀಚೆಗೆ ಪತ್ತೆಯಾಗಿರುವ 'ಪಲ್ಲಾಸ್ ಕ್ಯಾಟ್'ನಿಂದ ಹಿಮ ಪರ್ವತದ ಮಧ್ಯ ಭಾಗದಲ್ಲಿ ಬದುಕುವ ಆರು ಬಗೆಯ ಕಾಡು ಬೆಕ್ಕುಗಳನ್ನು ಗುರುತಿಸಿದಂತೆ ಆಗಿದೆ. ಮಂಜುಗಡ್ಡೆಯ ಗುಡ್ಡದಲ್ಲಿ ನೆಲೆಗೊಂಡಿರುವ ಹಿಮ ಬೆಕ್ಕುಗಳನ್ನು 'ಸ್ನೋ ಲೆಪರ್ಡ್', ಕ್ಲೌಡೆಡ್ ಲೆಪರ್ಡ್', 'ಲೆಪರ್ಡ್ ಕ್ಯಾಟ್', 'ಕಾಮನ್ ಲೆಪರ್ಡ್', 'ಮಾರ್ಬಲ್ಡ್ ಕ್ಯಾಟ್' ಗುರುತಿಸಲಾಗಿತ್ತು. ಈಗ ಆ ಸಾಲಿಗೆ 'ಪಲ್ಲಾಸ್ ಕ್ಯಾಟ್' ಸೇರಿದೆ.

ಪಲ್ಲಾಸ್ ಬೆಕ್ಕು ಅಥವಾ 'ಮನುಲ್' ಬೂದು ಬಣ್ಣದ ದಟ್ಟವಾದ ತುಪ್ಪಳವನ್ನು ಹೊಂದಿರುತ್ತದೆ. ದೇಹದ ಉದ್ದವು 21ರಿಂದ 31 ಸೆಂ.ಮೀಟರ್ ಇರುತ್ತದೆ. ಉದ್ದನೆಯ ಬಾಲ ಅದಕ್ಕಿದೆ. ಬಾಲದ ತುದಿಯಿಂದ ಲೆಕ್ಕ ಹಾಕಿದರೆ 46ರಿಂದ 65 ಸೆಂ.ಮೀ. ಉದ್ದ ಇರುತ್ತದೆ. 2.5 ಕೇಜಿಯಿಂದ 4.5 ಕೇಜಿ ತೂಗಬಹುದು ಎನ್ನಲಾಗಿದೆ. ದುಂಡನೆ ಕಿವಿಗಳನ್ನು ಹೊಂದಿರುವ ಈ ಬೆಕ್ಕಿನ ಕಣ್ಣು ತಿಳಿಹಳದಿ ಬಣ್ಣದಿಂದ ಕೂಡಿದೆ. ಭಾರತವೂ ಸೇರಿದಂತೆ ಇರಾನ್, ಅಫ್ಘಾನಿಸ್ತಾನ, ಪಾಕಿಸ್ತಾನ, ಮಂಗೋಲಿಯಾ ಮತ್ತು ರಷ್ಯಾ ಇದರ ಆವಾಸಸ್ಥಾನ ಎಂದು ಗುರುತಿಸಲಾಗಿದೆ.

ವಿಶ್ವದ ಪ್ರಾಚೀನ ಬೆಕ್ಕಿನ ಜೀವಸಂಕುಲಕ್ಕೆ ಸೇರಿದೆ. ಅದರ ಇರುವಿಕೆಗೆ ಐವತ್ತು ಲಕ್ಷ ವರ್ಷಗಳ ಇತಿಹಾಸವಿದೆ. ಅಪರೂಪದ ಈ ಬೆಕ್ಕು ಸಾಮಾನ್ಯವಾಗಿ ಮಧ್ಯ ಏಷ್ಯಾದಲ್ಲಿ ಕಾಣಸಿಗುತ್ತದೆ. ಇದಕ್ಕೆ ಕೀರಲು ಧ್ವನಿಯಿಂದ ಕೂಗುವ ಶಕ್ತಿಯೂ ಇದ್ದು, ಸಾಮಾನ್ಯವಾಗಿ ಕೋಪದಿಂದ ತನ್ನ ಕೆಂಗಣ್ಣುಗಳನ್ನು ಬೀರುತ್ತಿರುವಂತೆ ಗೋಚರಿಸುತ್ತದೆ. ಆದರೆ ಸಂಕೋಚದ ಮುದ್ದೆಯಂತಿರುವ ಪಲ್ಲಾಸ್ ನಾಚಿಕೆ ಜೀವಿ. ಸಾಮಾನ್ಯವಾಗಿ ಒಂಟಿಯಾಗಿಯೇ ಇರುತ್ತದೆ. ಪೊದೆ, ಕಲ್ಲಿನ ಪೊಟರೆ, ಬಿಲಗಳಲ್ಲಿ ಆಶ್ರಯವನ್ನು ಪಡೆಯುತ್ತದೆ. ನಿಸರ್ಗ ಸಹಜ ಅದರ ಅಂಗ ರಚನೆ ಎಂತಹ ಭೀಕರ ಚಳಿಯನ್ನೂ ಕಾಪಾಡುತ್ತದೆ. ಒಂಬತ್ತರಿಂದ ಹತ್ತು ವರ್ಷಗಳ ಆಯುಷ್ಯ ಈ ಬೆಕ್ಕಿಗೆ ಇದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65